ತೆಗೆದುಕೊಳ್ಳುವುದರಲ್ಲಿ ಅವರು ಮೆಡಿಕಲ್, ಇಂಜಿನಿಯರಿಂಗ್ ಮುಗಿಸಿರುತ್ತಾರೆ ಮತ್ತು ಉದ್ಯೋಗದಲ್ಲಿ ಸೇರಿರುತ್ತಾರೆ. ಇಂಥ ಪ್ರಕರಣಗಳೂ ಸಹ ಸರ್ಕಾರದ ಗಮನಕ್ಕೆ ಬಂದಿರುತ್ತವೆ. ನಾವು ಬೇಕಾದರೆ ಸರಳೀಕೃತವಾಗಿ ಪರಿಶೀಲನೆ ಮಾಡಿ 3 ದಿನಗಳಲ್ಲಿ ಸರ್ಟಿಫಿಕೇಟ್ ಕೊಡಬೇಕೆಂದು ಸುತ್ತೋಲೆ ಕಳುಹಿಸೋಣ. ಆದರೆ ಎಲ್ಲಾ ದಾಖಲಾತಿಗಳನ್ನು ಸರಳೀಕೃತಗೊಳಿಸದಾಕ್ಷಣ ಸರ್ಟಿಫಿಕೇಟ್ ಕೊಡತಕ್ಕ ವ್ಯವಸ್ಥೆಯಲ್ಲಿ ಅವರ ಕಾಲದಲ್ಲಿ ಇದು ಅವ್ಯವಹಾರಕ್ಕೆ ಅವಕಾಶವಾಗಿರಬಹುದು. ಆ ದಾಖಲಾತಿ ಯಾವುದು? ನಾಯಕ ಜಾತಿ ಎಂದು ಪ್ರಾಥಮಿಕ ಶಾಲೆಯಲ್ಲಿ ಸೇರಿಸಿರುತ್ತಾರೆ. ಅವರ ಅಪ್ಪ ಅದೇ ಜಾತಿ ಆಗದಿದ್ದರೆ ಏನು ಮಾಡಬೇಕು? ಅದನ್ನು ಪರಿಶೀಲಿಲು ಎಂದು ಹೇಳತಕ್ಕದ್ದು. ಒಂದು ವೇಳೆ ಕಾಗದಪತ್ರ ವ್ಯವಹಾರ ಮಾಡುವಾಗ, ಸೇಲ್ ಡೀಡ್ ಆದಾಗ ಬೇರೆ ಜಾತಿ ಎಂದು ಇದ್ದರೆ ಆಗ ಸಮಸ್ಯೆ ಬರುತ್ತದೆ. ಕಾರಣ ಇಷ್ಟೆ: ಅವ್ಯವಹಾರಗಳಿಗೆ ಅವಕಾಶ ಆಗದೇ ಇರತಕ್ಕ ರೀತಿಯಲ್ಲಿ ಆಗಬೇಕೆಂದು ಸರಳೀಕೃತಗೊಳಿಸುವ ಬಗ್ಗೆ ತಾವು ಹೇಳಿದ್ದೀರಿ. ಆದಷ್ಟು ಜಾಗ್ರತೆ ದಾಖಲಾತಿಗಳನ್ನು ಪರಿಶೀಲಿಸಿ ಕೊಡಿ ಅಂದರೆ ಅದರ ಬಗ್ಗೆ ಬೇಕಾದರೆ ತಮ್ಮ ಜೊತೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳೋಣ, ತಾವು ಬನ್ನಿ.

ಶ್ರೀ ವಾಟಾಳ್ ನಾಗರಾಜ್ : ಈ ಉತ್ತರ ನನಗೆ ಸಮಾಧಾನವಾಗಿಲ್ಲ. ಆದ್ದರಿಂದ ನಾನು ಧರಣಿ ಮಾಡುತ್ತೇನೆ.

(ಶ್ರೀ ವಾಟಾಳ್ ನಾಗರಾಜ್ ಅವರು ಸಭಾಧ್ಯಕ್ಷರ ಮುಂಭಾಗದಲ್ಲಿ ಧರಣಿ ಹೂಡಿದರು)

ಶ್ರೀ ಎ. ರಾಮದಾಸ್ : ಇದು ಮೈಸೂರು ಜಿಲ್ಲೆಯಲ್ಲಿ ಕೇವಲ ಒಬ್ಬರ ಸಮಸ್ಯೆ ಅಲ್ಲ. ಲಕ್ಷಾಂತರ ಜನರ ಸಮಸ್ಯೆಯಾಗಿದೆ. ಅವ್ಯವಹಾರ ಆಗಿರುವುದರ ಬಗ್ಗೆ ಹೇಳುತ್ತಿಲ್ಲ. ಇಡೀ ಜನಾಂಗದ ಬಗ್ಗೆ ಶ್ರೀ ಮೊಯಿಲಿಯವರ ಕಾಲದಲ್ಲಿ ಏನು ಒಂದು ಆದೇಶವನ್ನು ಹೊರಡಿಸಲಾಗಿತ್ತು. ಆ ಆದೇಶವನ್ನು ಹಿಂದಕ್ಕೆ ತೆಗೆದುಕೊಂಡಿದ್ದು ತಪ್ಪು ಎಂದು ಅದರ ಬಗ್ಗೆ ಇವತ್ತು ನಾವು ಇಲ್ಲಿ ಮಾತನಾಡುತ್ತಿದ್ದೇವೆಯೇ ಹೊರತು ಕೇವಲ ಆಕ್ರಮದ ಬಗ್ಗೆ ನಾವು ಮಾತನಾಡುತ್ತಿಲ್ಲ. ಇದು ಯಾರೋ ಒಬ್ಬರ ಪ್ರಶ್ನೆ ಅಲ್ಲ, ಇಡೀ ನಾಯಕ ಜನಾಂಗದ ಪ್ರಶ್ನೆ. ಇದರ ಬಗ್ಗೆ ಏನು ಸುತ್ತೋಲೆ ಹೊರಡಿಸಿದ್ದಾರೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾವು ಧರಣಿ ಮಾಡುತ್ತೇವೆ.

(ಶ್ರೀ ರಾಮದಾಸ್ ಅವರು ಮತ್ತು ಶ್ರೀ ಪುಟ್ಟಣ್ಣಯ್ಯ ಅವರೂ ಸಹ ಧರಣಿಯಲ್ಲಿ ಪಾಲ್ಗೊಂಡರು)

(ಗೊಂದಲ)

ಉಪಾಧ್ಯಕ್ಷರು : ತಾವು ಎಲ್ಲರೂ ಎದ್ದುನಿಂತರೆ ಅವರು ಹೇಗೆ ಉತ್ತರ ಕೊಡಬೇಕು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಸುಳ್ಳು ಜಾತಿ ದಾಖಲಾತಿಗೆ ಏನು ಮಾಡಬೇಕೆಂದು ತಾವು ಹೇಳಿ. ಇದು ಯಾವ ರೀತಿ ಪರಿಶೀಲನೆ ಆಗಬೇಕು? ನಾಯಕ ಜಾತಿ ಎಂದು ಸರ್ಟಿಫಿಕೇಟ್ ಕೊಟ್ಟುಬಿಟ್ಟರೆ....

(ಗೊಂದಲ)